ನಿಮ್ಮಲ್ಲಿ ಯಾರೂ ತನ್ನ ಸಹೋದರನತ್ತ ಆಯುಧವನ್ನು ತೋರಿಸಬಾರದು. ಏಕೆಂದರೆ ಅವನಿಗೆ ತಿಳಿದಿಲ್ಲ, ಬಹುಶಃ ಶೈತಾನನು ಅವನ ಕೈಯನ್ನು ಚಲಿಸುವಂತೆ ಮಾಡಬಹುದು, ಆಗ ಅವನು (ಆ ಕಾರಣದಿಂದ) ನರಕದ ಒಂದು ಹೊಂಡದಲ್ಲಿ ಬೀಳುವ ಸಾಧ್ಯತೆಯಿದೆ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಿಮ್ಮಲ್ಲಿ ಯಾರೂ ತನ್ನ ಸಹೋದರನತ್ತ ಆಯುಧವನ್ನು ತೋರಿಸಬಾರದು. ಏಕೆಂದರೆ ಅವನಿಗೆ ತಿಳಿದಿಲ್ಲ, ಬಹುಶಃ ಶೈತಾನನು ಅವನ ಕೈಯನ್ನು ಚಲಿಸುವಂತೆ ಮಾಡಬಹುದು, ಆಗ ಅವನು (ಆ ಕಾರಣದಿಂದ) ನರಕದ ಒಂದು ಹೊಂಡದಲ್ಲಿ ಬೀಳುವ ಸಾಧ್ಯತೆಯಿದೆ".
[صحيح] [متفق عليه]

ಒಬ್ಬ ಮುಸ್ಲಿಂ ತನ್ನ ಮುಸ್ಲಿಂ ಸಹೋದರನಿಗೆ ಯಾವುದೇ ರೀತಿಯ ಶಸ್ತ್ರದಿಂದ ಸೂಚಿಸುವುದರ ಬಗ್ಗೆ ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಎಚ್ಚರಿಸಿದ್ದಾರೆ. ಏಕೆಂದರೆ, ಅವನಿಗೆ ತಿಳಿದಿರಲಾರದು, ಬಹುಶಃ ಶೈತಾನನು ಅವನ ಕೈಯಲ್ಲಿರುವ ಶಸ್ತ್ರಾಸ್ತ್ರವನ್ನು ಚಲಿಸುವಂತೆ ಪ್ರೇರೇಪಿಸಿ, ಅವನು ತನ್ನ ಸಹೋದರನನ್ನು ಕೊಲ್ಲುವಂತೆ ಅಥವಾ ಅವನಿಗೆ ಗಾಯಗೊಳಿಸುವಂತೆ ಮಾಡಬಹುದು. ಇದರಿಂದಾಗಿ, ಅವನು ಪಾಪದಲ್ಲಿ ಏರ್ಪಟ್ಟು, ಅದು ಅವನನ್ನು ನರಕದ ಹೊಂಡದಲ್ಲಿ ಬೀಳಲು ಕಾರಣವಾಗಬಹುದು.

http://sunnah.global/hadeeth/kn/show/66246